

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 Issue : 185 Saturday 29-03-2025 E-mail : maruti.b.hosamani76@gmail.com Page: 4 Price : Rs. 1/-


## ಯತ್ನಾಳರ ಉಚ್ಚಾಟನೆ ಖಂಡಿಸಿ ಟೈರಿಗೆ ಬೆಂಕಿ ಹಚ್ಚಿ ಪ್ರತಿಭಟನೆ



**ಬಸವನ ಬಾಗೇವಾಡಿ :** ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನಲ್ಲಿ ನಡೆದ ಪ್ರತಿಭಟನೆ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಹಿಸಿದ ಪಂಚಮಸಾಲಿ ಸಮಾಜದ ಹಾಗೂ ಬಸನಗೌಡ ಪಾಟೀಲ್ ಯತ್ನಾಳರ ಅಭಿಮಾನಿಗಳು ಪ್ರತಿಭಟನೆ ಉದ್ದೇಶಿಸಿ ಪಂಚಮಸಾಲಿ ಸಮಾಜ ತಾಲೂಕ ಹೋರಾಟ ಸಮಿತಿ ಅಧ್ಯಕ್ಷರಾದ ಶ್ರೀಕಾಂತ ಕೊಟ್ರಶೆಟ್ಟಿ ಅವರು ಮಾತನಾಡಿದರು.

ಬಸನಗೌಡ ಪಾಟೀಲ್ ಯತ್ನಾಳರು ಒಂದು ಸಮಾಜಕ್ಕೆ ಸೀಮಿತವಾಗದೆ ಇಡೀ ಹಿಂದೂ ಸಮಾಜಕ್ಕೆ ಅವರು ಒಂದು ಶಕ್ತಿ ಇದ್ದ ಹಾಗೆ ಹಿಂದುತ್ವ ಬಗ್ಗೆ ಮಾತನಾಡಬಾರದಾ ಅವರನ್ನು ಬಿಜೆಪಿ ಪಕ್ಷ ಉಚ್ಚಾಟನೆ ಮಾಡಿರುವುದು ಖಂಡನೀಯ ಮುಂಬರುವ ದಿನಗಳಲ್ಲಿ ಯತ್ನಾಳರ ಶಕ್ತಿ ಏನು ಎಂಬುದು ನಾವು ತೋರಿಸುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ವಿವಿಧ ಮುಖಂಡರು ಅಭಿಮಾನಿಗಳು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ.ತಾಳಿಕೋಟೆ**

## ನಗರದ ಕಂಠಿ ಸರ್ಕಲ್ ಬಳಿಯಿರುವ ಇಬ್ರಾಹಿಂ ಮಸ್ಜಿದ್ ಸಭಾಂಗಣದಲ್ಲಿ ಜಮಾಅತೆ ಇಸ್ಲಾಮೀ ಹಿಂದ್

**ಇಳಕಲ್ಲ :** ಇಳಕಲ್ಲ ಮತ್ತು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಜೇಷನ್ ಆಫ್ ಇಂಡಿ–ಯಾ (ಖಙಔ) ಇಳಕಲ್ಲ ಇದರ ಜಂಟಿ ಆಶ್ರಯದಲ್ಲಿ ಗುರುವಾರ ಸಾಯಂಕಾಲ ಏರ್ಪಡಿಸಿದ್ದ "ಸೌಹಾರ್ದ ಇಫ್ತಾರ್ ಕೂಟ" ಕಾರ್ಯಕ್ರಮದಲ್ಲಿ ನಗರದ ಗಣ್ಯರು ಮತ್ತು ವಿದ್ಯಾರ್ಥಿ–ಯುವಜನ ಮುಖಂಡರು ಹಾಗೂ ಸರ್ವ ಧರ್ಮೀಯರ ಬಂಧುಗಳು ಭಾಗವಹಿಸಿದ್ದರು.

ಎಸ್.ಐ.ಓ ಜಿಲ್ಲಾಧ್ಯಕ್ಷರಾದ ಮೊಹಮ್ಮದ್ ಪೀರ್ ಲಟಗೇರಿ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಸೌಹಾರ್ದ ಇಫ್ತಾರ್ ಕೂಟವು ಪರಸ್ಪರರ ನಂಬಿಕೆ, ಆಚರಣೆ ಮತ್ತು ಧರ್ಮಶ್ರದ್ಧೆ ಅರಿಯುವ ಹಾಗೂ ರಮ್ಜಾನ್ ತಿಂಗಳ ಉಪವಾಸದ ಶುಭ ಸಂದರ್ಭದಲ್ಲಿ ಉಪವಾಸಿಗನ ಜೊತೆ ಭಿನ್ನ ನಂಬಿಕೆ, ಬಹು ಧರ್ಮೀಯ ಜನ ರೊಂದಿಗೆ ಸಹ ಪಂಕ್ತಿಯಲ್ಲಿ ಕುಳಿತು ಸೌಹಾರ್ದಯುತ ಮನೋಭಾವವನ್ನು ಬೆಳೆಸುವುದು ಇಫ್ತಾರ್ ಕೂಟದ ಆಶಯವಾಗಿದೆ. ಎಂದು ಹಾಗೂ ಈ ನೆಲದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪರಂಪರೆಯು ಕೂಡಿ ಬಾಳುವ ಸಂಸ್ಕೃತಿಯನ್ನು ಹೊಂದಿದ್ದು. ಈ ಬಗೆಯ ಕಾರ್ಯಕ್ರಮವು ಮಾನವ ಏಕತೆ ಮತ್ತು ಸ್ವಾಭಾವಿಕ ಸಹೋದರತ್ವದ ಒಂದು ಕುರುಹಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜನಾಬ ಲಾಲಹುಸೇನ ಕಂದಗಲ್ಲ ರವರು ಮಾತನಾಡಿ,"ಇಫ್ತಾರ್ ಎಂದರೆ ಬಿಡುವುದು, ಉಪವಾಸವನ್ನು ನಿರ್ದಿಷ್ಟ ಸಮಯದ ವರೆಗೆ ನಿರ್ವಹಿಸಿ ದೇವನ ಆದೇಶದಂತೆ ತೊರೆಯುವುದು ಇಫ್ತಾರ್ ನ ಅರ್ಥವಾಗಿದೆ ಎಂದರು.

ಇಫ್ತಾರ್ (ಉಪವಾಸ ತ್ಯಜಿಸುವುದು) ಅಪರಾಧ ಮನೋಭಾವ ಮತ್ತು ಎಲ್ಲಾ ಕೆಡುಕುಗಳನ್ನು ತ್ಯಜಿಸುವುದಾಗಿದೆ.



ಪೋಲಿಸರ ಭಾಷೆಯಲ್ಲಿ ಗಿರಫ್ತಾರ್ ಎಂದರೆ ಅಪರಾಧಿಗಳನ್ನು ಹಿಡಿಯುವುದು ಎಂದರ್ಥ. ಇಫ್ತಾರ್ ಅದ–ಕ್ಕೆ ವಿರುದ್ಧವಾದಿದ್ದು, ಸ್ವತಂತ್ರವಾಗುವುದು ಎಂದರ್ಥ ಎಂದರು.

ಎಲ್ಲ ಧರ್ಮಗಳು ಮತ್ತು ವೇದ ಗ್ರಂಥಗಳಲ್ಲಿಯೂ ಕೂಡಾ ಈ ಉಪವಾಸ ವ್ರತದ ಬಗ್ಗೆ ಉಲ್ಲೇಖಿಸಲಾಗಿದೆ. ಈ ಉಪವಾಸದಿಂದ ನಿಮ್ಮಲ್ಲಿ ದೇವಭಯ ಉಂಟಾಗಬೇಕು ಅಂದಾಗ ಮಾತ್ರ ಈ ಉಪವಾಸ ವ್ರತಕ್ಕೆ ನಿಜವಾದ ಅರ್ಥ ಬರುತ್ತದೆ ಎಂದರು. ನನ್ನ ವರ್ತನೆಯಲ್ಲಿ ಬದಲಾವಣೆ ಯಾಗದಿದ್ದರೆ. ನನ್ನ ಜೀವನದಲ್ಲಿ ಬದಲಾವಣೆ ಆಗದಿದ್ದರೆ ಬೆಳಿಗ್ಗೆಯಿಂದ ಹಸಿವು ದಾಹ ಸಹಿಸುವುದು ವ್ಯರ್ಥವಾಗುವುದು. ಈ ಉಪವಾಸದ ಮೂಲ ಉದ್ದೇಶವು ನಮ್ಮ ಇಂದ್ರಿಯಗಳನ್ನು ನಿಗ್ರಹಿಸುವುದಾಗಿದೆ, ಯಾವಾಗಲೂ ನನ್ನ ದೇವ ನನ್ನನ್ನು ನೋಡುತ್ತಿದ್ದಾನೆ, ನಾನು ಎಲ್ಲ ಕೆಡುಕುಗಳಿಂದ ದೂರ ಉಳಿಯಬೇಕು ಎನ್ನುವ ಭಾವನೆಯೇ ಇದರ ಹಿಂದಿರುವ ತಿರುಳಾಗಿದೆ ಎಂದರು. ಹಸಿವು, ದಾಹ ಸಹಿಸಿದಂತೆ ನಿಮ್ಮ ಅರಿಷಡ್ವರ್ಗಗಳನ್ನು ನಿಯಂತ್ರಿಸ ಬೇಕಾಗಿದೆ. ಇವತ್ತು ಎಲ್ಲ ಸವಲತ್ತುಗಳು ನಮ್ಮ ಬಳಿ ಇವೆ ಆದ–ರೆ ನೈತಿಕ ಮೌಲ್ಯಗಳ ಕೊರತೆ ಇದೆ ಉಪವಾಸ ವ್ರತದಿಂದ ಅದನ್ನು ಪಡೆಯಲು ಸಾಧ್ಯವಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇಳಕಲ್ಲ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಸಿ.ಸಿ ಚಂದ್ರಾಪಟ್ಟಣ ಸರ್ ರವರು ಮಾತನಾಡಿ ಜಮಾಅತೆ ಇಸ್ಲಾಮೀಯು ಇಂತಹ ಕಾರ್ಯಕ್ರಮಗಳಿಂದ ನಗರದಲ್ಲಿ ಎಲ್ಲಾ ಧರ್ಮಗಳ ಮಧ್ಯೆ ಸೌಹಾರ್ದತೆ ಬೆಸೆಯುವ ಕೆಲಸ ಮಾಡುತ್ತಿದೆ ಎಂದರು, ಸಂಘಟನೆಯವರು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇಂತಹ ಕಾರ್ಯಕ್ರಮಗಳನ್ನು ಮಾಡಬೇಕು ಅಂದಾಗ ಮಾತ್ರ ದೇಶದಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತದೆ ಎಂದರು. ಇನ್ನೋರ್ವ ಮುಖ್ಯ ಅತಿಥಿಗಳಾದ ಮಹಾದೇವ ಕಂಬಾಗಿ ರವರು ಮಾತನಾಡಿ "ಇಫ್ತಾರ್ ಸೌಹಾರ್ದ ಕೂಟ" ದಲ್ಲಿ ಸಂದರ್ಭೋಚಿತವಾಗಿ ಮಾತನಾಡುತ್ತಾ ತಮ್ಮ ಬಾಲ್ಯದ ಸೌಹಾರ್ದ ದಿನಗಳನ್ನು ಮೆಲುಕು ಹಾಕಿದರು ಹಾಗೂ ನಮ್ಮ ಹಿರಿಯರು ಕಲಿಸಿದ ಸಾಮರಸ್ಯದ ಮೌಲ್ಯಗಳನ್ನು ನಾವು ನಮ್ಮಲ್ಲಿ ಸಂಪೂರ್ಣವಾಗಿ ಅಳವಡಿಸಿ ಕೊಳ್ಳಲು ಹಾಗೂ ಇಂದಿನ ವಿದ್ಯಾರ್ಥಿ–ಯುವಕರು ವ್ಯಾಟ್ಸಾಪ್ ಸಂದೇಶಗಳನ್ನೆ ಸತ್ಯವೆಂದು ತಿಳಿದು, ವರ್ತಿಸುವುದು ಸರಿಯಲ್ಲ, ಕನ್ನಡ ಸಾಹಿತ್ಯ ಮತ್ತು ನಮ್ಮ ಸಹಬಾಳ್ವೆಯ ಪರಂಪರೆಯನ್ನು ಮುಂದುವರೆಸಿ ಕೊಂಡು ಹೋಗಬೇಕು ಎಂದರು.

ಯುವ ಮುಖಂಡರಾದ ಹನುಮಂತ ಚುಂಚಾ ರವರು ಎಸ್.ಐ.ಓ (ಖಙಔ) ಸಂಘಟನೆಯವರು ವಿದ್ಯಾರ್ಥಿ ಯುವ ಜನರ ನಡುವೆ ಅದ್ಭುತ ಕಾರ್ಯ ಮಾಡುತ್ತಿದ್ದು, ಶೈಕ್ಷಣಿಕ ಮತ್ತು ಸಾಮಾಜಿಕ ರಂಗದಲ್ಲಿ ಇತರರಿಗೆ ಮಾದರಿ ಯಾಗಿದ್ದು, ಸರ್ಕಾರಿ ಶಾಲೆ, ಸಾರ್ವಜನಿಕ ವಿಶ್ವವಿದ್ಯಾಲಯ ಉಳಿವಿಗಾಗಿ, ವಿದ್ಯಾರ್ಥಿಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವುದಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಡೈಟ್ ಕಾಲೇಜಿನ ಉಪನ್ಯಾಸಕರಾದ ಅಮರಯ್ಯ ಕಪ್ಪರದ ರವರು ಸೌಹಾರ್ದತೆಯ ಕುರಿತು ಮಾತನಾಡಿದರು.

ನಗರದ ತೆರಿಗೆ ಸಲಹೆಗಾರರಾದ ಶ್ರೀ ಪ್ರಶಾಂತ್ ಹಂಚಾಟೆ ರವರು ಹಿಂದೂ–ಮುಸ್ಲಿಂ ಭಾವೈಕ್ಯತೆಯ ಹಾಗೂ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದರು. ಯುವ ಮುಖಂಡರಾದ ರಾಘವೇಂದ್ರ ಶಿಂಗಸೆಟ್ಟಿ ರವರು ಕೂಡಿ ಬಾಳುವ ಸಂಸ್ಕೃತಿ ಮತ್ತು ಕುರ್ ಆನ್ ನೀಡಿದ ಮಾನವ ಏಕತೆ ಕುರಿತು ಮಾರ್ಮಿಕವಾಗಿ ಮಾತನಾಡಿದರು. ವೇದಿಕೆ ಮೇಲೆ ನಗರಸಭಾ ಸದಸ್ಯರಾದ ಸುರೇಶ ಜಂಗ್ಲಿ, ಜಮಾಅತೆ ಇಸ್ಲಾಮೀಯ ಬಾಗಲಕೋಟೆ ಜಿಲ್ಲಾ ಸಂಚಾಲಕ ಅಬ್ದುಲ್ ರಹ್ಮಾನ ಬಿಳೇಕುದರಿ, ಸ್ಥಾನೀಯ ಅಧ್ಯಕ್ಷರಾದ ಸಯೀದ್ ಅಹ್ಮದ್ ಕೊತ್ವಾಲ್, ಉಪಸ್ಥಿತರಿದ್ದರು. ಕಾರ್ಯಕ್ರಮವು ಮೌಲಾನಾ ಫಾರೂಕ ಉಮರಿ ರವರ ಕುರಾನ್ ಪಠಣದ ಮೂಲಕ ಪ್ರಾರಂಭವಾಯಿತು, ಅಬ್ದುಲ್ ಗಫಾರ್ ರವರು ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ. ಇಲಕಲ್ಲ**

## ವಿದ್ಯುತ್ ಶಾಕ್‌ದಿಂದ ಮೃತಪಟ್ಟ ವ್ಯಕ್ತಿಯ ಮನೆಗೆ ಮಹೇಶ ಹೊಸಗೌಡ್ರ ಭೇಟಿ; ಸಾಂತ್ವನ, ಆರ್ಥಿಕ ಸಹಾಯ



**ಬಾದಾಮಿ :** ಪಟ್ಟಣದ ಹೊರವಲಯದ ಜಯನಗರದಲ್ಲಿ ಗುರುವಾರ ಕರೆಂಟ್ ಶಾಕ್ ನಿಂದ ಮೃತಪಟ್ಟ ಸೊಹೈಲ್ ಮಕ್ತುಮ್ ಸಾಬ್ ಅಸೂಟಿ ಇವರ ಮನೆಗೆ ಯುವಮುಖಂಡ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಹೊಸಗೌಡ್ರ ಇವರು ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಮೃತನ ಕುಟುಂಬಕ್ಕೆ ತಮ್ಮ ವಯಕ್ತಿಕವಾಗಿ ರೂ.10ಸಾವಿರ ಹಣವನ್ನು ಕೊಟ್ಟು, ಮಾನವೀಯತೆ ಮೆರೆದರು. ಈ ಸಂದರ್ಭದಲ್ಲಿ ನಗರದ ಮಹಮ್ಮದ ಉಮರ ಮೋಮಿನ್, ರಾಜಸಾಬ ಬೆಫಾರಿ, ಅಲ್ಲಾಭಕ್ಷಿ ಕುಂಡೆನಾಯಕ್, ನೂರ್ ನದಾಫ್, ಸಿರಾಜ್ ಅಡ್ವಾನಿ, ಇಮ್ರಾನ್ ಮೋಮಿನ, ಶಪೀಕ ಜಲಗೇರಿ, ರಾಜಸಾಹೇಬ ಮತ್ತಿಕಟ್ಟಿ ಸೇರಿದಂತೆ ಅಲ್ಪಸಂಖ್ಯಾತರ ಸಮಾಜದ ಗುರುಹಿರಿಯರು ಉಪಸ್ಥಿತರಿದ್ದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ

**ಬಾದಾಮಿ :** ತಾಲೂಕಿನ ಕಿತ್ತಲಿ, ಹೆಬ್ಬಳ್ಳಿ, ಗೋವನಕೊಪ್ಪ, ಕಾತರಕಿ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಹೆಬ್ಬಳ್ಳಿ ಪರೀಕ್ಷಾ ಕೇಂದ್ರದಲ್ಲಿ 265 ವಿದ್ಯಾರ್ಥಿಗಳಿಗೆ ಮತ್ತು ಮುತ್ತಲಗೇರಿ, ಬೆಳವಲಕೊಪ್ಪ, ನೀಲಗುಂದ ಪ್ರೌಢಶಾಲೆಯ 145 ವಿದ್ಯಾರ್ಥಿಗಳಿಗೆ ದಿಂ.ಲಕ್ಷ್ಮಣ ಯಲ್ಲಪ್ಪ ಹಟ್ಟಿ ಶಿಕ್ಷಣ ಮತ್ತು ಸೇವಾ ಟ್ರಸ್ಟ್ ಬಾದಾಮಿ ಇವರ ವತಿಯಿಂದ ಟ್ರಸ್ಟ್‌ನ ಅಧ್ಯಕ್ಷ, ಕೆಪಿಸಿಸಿ ರಾಜ್ಯ ವಕ್ತಾರ ಮಹಾಂತೇಶ ಹಟ್ಟಿ ಇವರು ಮಕ್ಕಳಿಗೆ ಪೆನ್ನು, ಬಿಸ್ಕೀಟು, ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸಿದರು. ಈ ಸಂದರ್ಭದಲ್ಲಿ ಹೆಬ್ಬಳ್ಳಿ ಗ್ರಾ.ಪಂ.ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಎಸ್.ಡಿ.ಎಂ.ಸಿ.ಅಧ್ಯಕ್ಷ, ಉಪಾಧ್ಯಕ್ಷರು, ಗ್ರಾಮದ ಗುರುಹಿರಿಯರು, ಯುವಕರು ಹಾಜರಿದ್ದರು.



## ಕುರಿದೊಡ್ಡಿಗೆ ಪಿ.ಎಸ್.ಐ. ಭೇಟಿ

**ಬಾದಾಮಿ :** ಪೊಲೀಸ್ ಠಾಣಾ ವ್ಯಾಪ್ತಿಯ ಗ್ರಾಮಗಳ ಸುತ್ತಮುತ್ತಲಿನ ಕುರಿಗಾಹಿಗಳ ಕುರಿ ದಡ್ಡಿಗಳಿಗೆ ಪಿ.ಎಸ್.ಐ.ವಿಠ್ಠಲನಾಯಕ ಭೇಟಿ ನೀಡಿ ಕುರಿಗಾಹಿಗಳ ಆತ್ಮರಕ್ಷಣೆ ಮತ್ತು ಅವರ ಸಂರಕ್ಷಣೆ ಸಲುವಾಗಿ ವಿಶೇಷ ಬಂದೂಕುತರಬೇತಿಯನ್ನು ಬಾಗಲಕೋಟ ಡಿಎಆರ್ ಘಟಕದಲ್ಲಿ ಮುಂದಿನ ತಿಂಗಳು ಎಪ್ರಿಲ್ 7 ರಿಂದ 13 ನೇ ತಾರೀಖಿನ ವರೆಗೆ ಇರುತ್ತದೆ ಹಾಗೆಯೇ ಪ್ರಮಾಣ ಪತ್ರವನ್ನು ಸಹ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಎಸ್.ಪಿ.ಯವರ ಸೂಚನೆ ಮೇರೆಗೆ ರಾತ್ರಿ ಸಮಯದಲ್ಲಿ ಕುರಿದಡ್ಡಿಗಳ ಕಡೆಗೆ ಜಾಸ್ತಿ ಗಮನ ಹರಿಸಬೇಕು ಏನಾದರು ತೊಂದರೆ ಇದ್ದಲ್ಲಿ ಪೊಲೀಸ್ ಠಾಣೆಗೆ ತಿಳಿಸಬೇಕು ಹಾಗೆಯೇ ತುರ್ತು ಸೇವೆಯ 112 ನಂಬರಿಗೆ ಕರೆ ಮಾಡಲು ಮಾಹಿತಿ ತಿಳಿಸಿದರು.




## ಯಲಗೋಡ ಗ್ರಾಮ ಪಂಚಾಯತಿಯ ಯುಗಾದಿ ಹಾಗೂ ರಂಜಾನ್ ಹಬ್ಬದ ಹಾರ್ಧಿಕ ಶುಭಾಶಯಗಳು

ತಾಲೂಕ. ದೇವರ ಹಿಪ್ಪರಗಿ ಜಿಲ್ಲಾ. ವಿಜಯಪುರ





1 ಅಧ್ಯಕ್ಷರು ರೂಪಾ.ಚಂದ್ರಶೇಖರ ಅಸ್ಕಿ.
2 ಉಪಾಧ್ಯಕ್ಷರ ಶ್ರೀದೇವಿ.ಮಲ್ಲಕಪ್ಪ ಮಾದರ ಸದಸ್ಯರು
3 ಮಹಮದರಫೀಕ.ಸೈಯದ ಪಟೇಲ ಕಣಮೇಶ್ವರ
4 ಸುಜಾತ ಮಾದೇವಪ್ಪ,ನಾಟಿಕಾರ,
5 ರೇಣುಕಾ, ಭೂತಾಳಿ,ಇಂಗಳಗಿ
6,ಹುಸೇನಪ್ಪ,ಸಾಯಬಣ್ಣ,ತಳ್ಳೋಳ್ಳಿ,
7 ರಾಜೇಪಟೇಲ,ಕಾಶಿಮಪಟೇಲ,ಕಣಮೇಶ್ವರ,,
8ಸಾಂಬಾಯಿ,ಶೇಖಪ್ಪ,ಹಿರೇಕುರುಬರ,
9 ಬಸಲಿಂಗಪ್ಪ,ಶಿವಪ್ಪ,ಜ್ಯಾಯಿ,
10ನೀಲಮ್ಮ,ಗುರುನಾಥ, ರಾಠೋಡ,
11 ಸರಸ್ವತಿ, ತಿಪ್ಪಣ್ಣ,ಆಲಗೂರ,
12ಸಾಹೇಬ್ಬಿ,ಬಡೇಸಾ,ನದಾಫ,
13 ಕಾಕಾಶಿನಾಥ,ಬಸನಗೌಡ,ಬಿರಾದಾರ,
14 ಪ್ರಕಾಶ,ಶಂಕರ,ರಾಠೋಡ,

ಹಾಗೂ ಸರ್ವ ಸಿಬ್ಬಂದಿ ವರ್ಗದವರು, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಶಿವಾನಂದ, ಹಡಪದ. ಕಾರ್ಯದರ್ಶಿ ಅಮೀತಾ. ಗತಾಟೆ


## ಗುಲಾಬಿ ಹೂವು ನೀಡಿ ಆರತಿ ಬೆಳಗಿ ಪರೀಕ್ಷೆ ಬರೆಯಲು ಸ್ವಾಗತ

**ವಿಜಯಪುರ:** ಜಿಲ್ಲೆಯ ತಿಕೋಟಾ ತಾಲ್ಲೂಕಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜರುಗಿದ ಮೊದಲ ದಿನದ ಎಸ್ಸೆಸ್ಸೆಲ್ಸಿ ಪರೀಕ್ಷೆಯು ಸುಸೂತ್ರವಾಗಿ ನಡೆದಿದ್ದು, ಹಲವು ಪರೀಕ್ಷಾ ಕೇಂದ್ರಗಳಲ್ಲಿ ಮಕ್ಕಳಿಗೆ ಭಯಮುಕ್ತ ಪರೀಕ್ಷೆ ಎದುರಿಸಲು ಪರೀಕ್ಷಾ ಕೇಂದ್ರದ ವತಿಯಿಂದ ವಿಭಿನ್ನ ರೀತಿಯಲ್ಲಿ ಸ್ವಾಗತವನ್ನು ಕೋರಲಾಯಿತು.

ತಿಕೋಟಾ ತಾಲ್ಲೂಕಿನ ಬಿಜ್ಜರಗಿ ಗ್ರಾಮದ ಮಾಣಿಕೇಶ್ವರಿ ಪ್ರೌಢ ಶಾಲೆಯಲ್ಲಿ ಶುಕ್ರವಾರ ಪ್ರಥಮ ಭಾಷೆ ಕನ್ನಡ ವಿಷಯ ದಿನದಂದು ವಿಧ್ಯಾರ್ಥಿಗಳಿಗೆ ಆರತಿ ಬೆಳಗಿ ಗುಲಾಬಿ ಹೂವು ನೀಡಿ ಸ್ವಾಗತಿಸಲಾಯಿತು.

ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಎಸ್. ಎಂ. ಅವಟಿ ಮಾತನಾಡಿ, ವಿಧ್ಯಾರ್ಥಿಗಳು ಭಯಮುಕ್ತವಾಗಿ ಪರೀಕ್ಷೆ ಬರೆಯಬೇಕು. ಪರೀಕ್ಷಾ ಕೊಠಡಿಯಲ್ಲಿ ನಕಲು ಮಾಡಲು ಅವಕಾಶವಿಲ್ಲ. ಇಡೀ ಪರೀಕ್ಷಾ ಕೇಂದ್ರ ಹಾಗೂ ಕೊಠಡಿಗಳು ಸಿಸಿ ಕ್ಯಾಮರಾ ನಿಗಾದಲ್ಲಿರುವದು. ಶಾಂತತೆಯಿಂದ ಪ್ರಶ್ನೆ ಪತ್ರಿಕೆಯನ್ನು ಅರ್ಥೈಸಿಕೊಂಡು ಉತ್ತರಗಳನ್ನು ಬರೆದು ನಿಮ್ಮ ಭವಿಷ್ಯ ಉಜ್ವಲಗೊಳಿಸಿಕೊಳ್ಳಬೇಕು ಎಂದು ವಿಧ್ಯಾರ್ಥಿಗಳಿಗೆ ಧೈರ್ಯ ತುಂಬಿದರು.



ಪ್ರತಿ ವಿಧ್ಯಾರ್ಥಿಗಳಿಗೆ ತಪಾಸಣೆ ಮಾಡಿ ಪರೀಕ್ಷಾ ಕೇಂದ್ರದೊಳಗೆ ಬಿಡಲಾಯಿತು. ಪರೀಕ್ಷಾ ಕೇಂದ್ರದ ಹೊರಗೆ ಸಾರ್ವಜನಿಕರಿಂದ ಯಾವುದೇ ತೊಂದರೆಯಾಗದಂತೆ ಸುಸೂತ್ರವಾಗಿ ಮೊದಲ ದಿನದ ಕನ್ನಡ ಭಾಷಾ ಪರೀಕ್ಷೆ ಯಶಸ್ವಿಯಾಗಿ ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ಉಪ ಅಧೀಕ್ಷಕ ಬಿ.ಎಂ.ಬಡಿಗೇರ, ಕಸ್ಟೋಡಿಯನ್ ಸಿ.ಎಲ್.ಪಾಟೀಲ್, ಸಂಸ್ಥೆಯ ಮುಖ್ಯೋಪಾಧ್ಯಾಯ ಚಿದಾನಂದ ಅವಟಿ, ಎಂ.ಡಿ. ಪಡಂದಾರ, ಬಿ.ಸಿ.ನಾವಿ, ಆನಂದ ಝುಂಡೆ, ಗಜಾನಂದ ಜುಂಜರವಾಡ, ಎಸ್. ಎನ್.ಬಾಗಲಕೋಟ ಇತರರಿದ್ದರು.

